ಹುಡುಗಿಯರು ಸ್ವಾಗತ ಮಾಡಲೆಂದು ವೇದಿಕೆಗೆ ಬಂದಾಗ ಕೇಕೆ ಹಾಕಿ ಹತಾಶೆ ಪ್ರಕಟಿಸುವರು. ಒಮ್ಮೆ ಕಿರುಬ–ನರಿಗಳ ಊಳೇ ತುಂಬಿಕೊಂಡಿದ್ದ ಸಮಾರಂಭದಲ್ಲಿ 'ಇದೇನಿದು ಹೀಗೆ?' ಎಂದು ಪ್ರಿನ್ಸಿಪಾಲರಲ್ಲಿ ವಿಚಾರಿಸಿದೆ. 'ಇಡೀ ವರ್ಷ ಟೈಟ್ ಮಾಡಿರ್ತೀವಲ್ಲ, ಹಿಂಗಾಗಿ ಇದೊಂದ್ ದಿನ ಫುಲ್‌ಫ್ರೀಡಂ. ಎಷ್ಟಾದರೂ ಆಗಸ್ಟ್ ತಿಂಗಳಲ್ಲವೆ ಇದು?' ಎಂದರು. ಅವರ ಮುಖದಲ್ಲಿ ಗಲಭೆಪೀಡಿತ ಪ್ರದೇಶಗಳಲ್ಲಿ ಕಾರ್ಯಾಚರಣೆ ಮಾಡಿದ ಬಂದ ಕರ್ನಲನ ವಿಜೇತ ಭಾವವಿತ್ತು. ಹಿಂದೆ ನಾನು ಕೆಲಸ ಮಾಡಿಕೊಂಡಿದ್ದ ಕಾಲೇಜಿನಲ್ಲಿ ಪ್ರಸಿದ್ಧ ಲೇಖಕರೊಬ್ಬರು ಬಂದಾಗ ಹೀಗೇ ಆಗಿತ್ತು. ಅವರು ಕಿಲಾಡಿ. 'ಪ್ರೀತಿಯ ಸ್ನೇಹಿತರೆ, ಶಿಳ್ಳೆ ಗುಟುರುಗಳ ಮೂಲಕ ಸ್ವಾಗತಿಸಿದ್ದಕ್ಕೆ ನಿಮಗೆಲ್ಲ ಥ್ಯಾಂಕ್ಸ್. ನಾನೂ ಹೀಗೇ ಮಾಡ್ತಿದ್ದೆ ಕಾಲೇಜು ದಿನಗಳಲ್ಲಿ. ನಿಮ್ಮಂತಹ ಬಿಸಿರಕ್ತದ ಹುಡುಗರು ಸಿಳ್ಳೆ ಹಾಕದಿದ್ದರೆ, ಹುಡುಗಿಯರನ್ನು ಚುಡಾಯಿಸದಿದ್ದರೆ, ನಾನೂ ಪ್ರಿನ್ಸಿಪಾಲರೂ ಅದನ್ನ ಮಾಡೋಕೆ ಆಗುತ್ಯೇ? ಸಿಳ್ಳೆ ಹಾಕೋದು ಜೀವಂತಿಕೆಯ ಲಕ್ಷಣ' ಎಂದು ಆರಂಭಿಸಿದರು. ಕೋತಿಗಳಿಗೆ ಹೆಂಡ ಕೊಟ್ಟಂತಾಯಿತು. ಅಂಗೈ ಮುರಿದುಕೊಳ್ಳುವಂತೆ ಚಪ್ಪಾಳೆ ಬಡಿದವು. ಹೀಗೆ ಪುಂಡರನ್ನೆಲ್ಲ ಸಂಮೋಹಿನಿ ತಂತ್ರದಿಂದ ವಶೀಕರಿಸಿಕೊಂಡ ಶ್ರೀಯುತರು ಒಂದು ಗಂಟೆ ಚಿಂತನಾಭರಿತ ವಾಕ್‌ಪ್ರವಾಹ ಹರಿಸಿದರು. ಹಾಗೆ ಹುಡುಗರನ್ನು ವಶೀಕರಣ ಮಾಡಿದವರು ಕವಿ ರಾಮಚಂದ್ರ ಶರ್ಮರಾಗಿದ್ದರು.

ನಿಜವಾದ ಕಲೆ ಇರುವುದು ರೆಡಿಮೇಡ್ ಟಿಪ್ಪಣಿ ಇಟ್ಟುಕೊಂಡು ಭಾಷಣ ಕಕ್ಕುವುದರಲ್ಲಲ್ಲ. ಭಾಷಣ ಕಾಲದಲ್ಲಿ ಪ್ರಕ್ಷುಬ್ಧಗೊಳ್ಳುವ ಸಭೆಯನ್ನು ವಶಕ್ಕೆ ತೆಗೆದುಕೊಳ್ಳುವುದರಲ್ಲಿ. ಹುಡುಗರ ಗಲಾಟೆಗೆ ಸಿಡಿಮಿಡಿಯುತ್ತ, 'ಏನಿದು? ಭವ್ಯಭಾರತದ ನಿರ್ಮಾಣ ಮಾಡಬೇಕಾದ ನಿಮಲ್ಲಿ ಚೂರೂ ಶಿಸ್ತಿಲ್ಲ. ಅಂಬೇಡ್ಕರ್, ಗಾಂಧೀಜಿ, ವಿವೇಕಾನಂದರು ನಿಮ್ಮ ವಯಸ್ಸಿನಲ್ಲಿ...' ಎಂದು ಶುರುಮಾಡಿದೆವೊ, ಗೊಟರು ರಸ್ತೆಯಲ್ಲಿ ಗುಜರಿ ವಾಹನವನ್ನು ವೇಗವಾಗಿ ಚಲಾಯಿಸಿದಂತೆ; ಕಣಜದ ಗೂಡಿಗೆ ಕೈಯಿಟ್ಟು ಕಲಕಿದಂತೆ. ಸಭೆ ಸಂತೆಯಾಗುತ್ತದೆ. ಕನಿಷ್ಠ ವ್ಯಾಪಾರವೂ ಆಗುವುದಿಲ್ಲ.

ಸಾಮಾನ್ಯವಾಗಿ ಭಾಷಣ ಕೆಡುವ ಶಕುನಗಳು ನನಗೆ ದೀಪಬೆಳಗುವಿಕೆ, ಸ್ವಾಗತ ಕಾರ್ಯಕ್ರಮ, ಪುಷ್ಪ ಸಮರ್ಪಣೆ, ಪರಿಚಯ ಭಾಷಣಗಳ ಹಂತದಲ್ಲೇ ಗೋಚರಿಸುತ್ತವೆ. ಒಮ್ಮೆ ಉದ್ಘಾಟಕರಾದ ಸ್ವಾಮೀಜಿಯೊಬ್ಬರು ದೀಪಬೆಳಗಲು ಐದು ಮಿನಿಟು ಮೊಂಬತ್ತಿ ಹಿಡಿದರು. ಬತ್ತಿ ಸ್ಪಂದಿಸಲಿಲ್ಲ. ಕೈಸೋತ ಅವರು ನನಗೆ ವರ್ಗಾಯಿಸಿದರು. ನಾನೂ ಯತ್ನಿಸಿದೆ. ಜುಮ್ಮೆನ್ನಲಿಲ್ಲ. ಬಹುಶಃ ಕಲಬೆರಕೆ ಎಣ್ಣೆಯಿರಬೇಕು. ಇದನ್ನೆಲ್ಲ ನೋಡುತ್ತ ನಿಂತಿದ್ದ ಮುಖ್ಯ ಅತಿಥಿ ಪತ್ರಕರ್ತರು ನನ್ನಿಂದ ಮೊಂಬತ್ತಿ ಕಿತ್ತುಕೊಂಡವರೇ ಬತ್ತಿಗೆ ಮುಟ್ಟಿಸಿದರು. ನಾವಿಬ್ಬರೂ ಬಿಸಿಮಾಡಿದ್ದರಿಂದ ಇರಬೇಕು–ಜಗ್ಗನೆ ದೀಪ ಹತ್ತಿತು. ಪಾನಪ್ರಿಯತೆಗೆ ಹೆಸರಾದ ಸದರಿ ಪತ್ರಕರ್ತರು, 'ನೋಡಿ, ಅಜ್ಜಾ ಅವರು ಹಚ್ಚಿದರು. ಹತ್ತಲಿಲ್ಲ. ವಿಮರ್ಶಕರು ಹಚ್ಚಿದರು. ಹತ್ತಲಿಲ್ಲ. ನಾನು ಮುಟ್ಟಿದ ಕೂಡಲೇ ಹತ್ತಕೋತು. ಯಾಕೆ?' ಎಂದು ಸಭೆಯ ಮುಂದೆ ಪ್ರಶ್ನೆಯಿಟ್ಟರು. ಸಭೆ ಗೊಂದಲಗೊಂಡು ಸುಮ್ಮನಿತ್ತು. ಅವರು ತಾವೇ ಒಗಟನ್ನು ಬಿಡಿಸಿದರು: 'ಎಣ್ಣೀ ಪ್ರಭಾವ ಎಣ್ಣೀ! ಎಣ್ಣಿ ಹಾಕೋರಿಗೇ ಇನ್ನೊಂದು ಎಣ್ಣಿ ಮಾತು ಕೇಳೋದು.' ಹೀಗೆ ಶುರುಮಾಡಿದ ಅವರು ಸಭೆಯನ್ನು ಮರುಳು ಮಾಡುವಂತೆ ಮಾತಾಡಿದರು. ಅವರ ಮುಂದೆ ನನ್ನ ಭಾಷಣ ಸಪ್ಪೆಗಂಜಿಯಾಯಿತು.

ಸಾಮಾನ್ಯವಾಗಿ ವೇದಿಕೆಗೆ ಅತಿಥಿಗಳನ್ನು ಕೂರಿಸುವ ಕೆಲಸವೇ ಕಾಲುಗಂಟೆ ಕಬಳಿಸುತ್ತದೆ.